ಕವಿತೆ



ಸುಧಾ ಆಡುಕಳ
ಕಲೆ: ಸಂತೋಷ್ ಸಸಿಹಿತ್ಲು



# ನೀನು ನಾನು

ನೀನು ನಾನೋ ನಾನು ನೀನೋ ಒಂದು ತಿಳಿಯದು
ನಿನ್ನೊಳಗೆ ನಾನು ಬೆರೆತುಹೋದ ಒಲವ ಕಥೆಯಿದು

ಹೊನ್ನೆ ಮರದ ನೆರಳಿನಲ್ಲಿ ನಿನ್ನ ತಬ್ಬಿದಾ ನೆನಪು
ಕಣ್ಣ ಗೂಡಿನಲ್ಲಿ ಸೇರಿ ಶಾಸನವೇ ಆಗಿಹೋಯ್ತು

ದೂರವಲ್ಲ ನಾನು ನೀನು ಸೋಕುವಷ್ಟು ಹತ್ತಿರ
ಕೈಯ್ಯ ಚಾಚಿ ತಬ್ಬದಂತೆ ಹಬ್ಬಿದೆ ಈ ಅಂತರ

ನನ್ನ ನಿನ್ನ ಉಸಿರು ಗಾಳಿಯಲ್ಲಿ ತೇಲಿಹೋದವು
ಮಳೆಯಾಗಿ ಸುರಿದ ನೆನಪಿನಲ್ಲಿ ನಾವು ಮತ್ತೆ ತೊಯ್ದೆವು

ಒಲವ ಮಳೆಯು ಸುರಿದ ಬಯಲ ತುಂಬ ಬರಿಯ ಹಸಿರು
ಅರಳಿ ನಿಂತ ಹೂವಿನೊಳಗೆ ಗಂಧವಾಗಿದೆ ಉಸಿರು

ಹೊನ್ನೆ ಮರದ ತೋಪಿನೊಳಗೆ ಸುಳಿವ ಗಾಳಿಯಲ್ಲಿ
ತೇಲಿ ಬರುವ ಘಮದ ತುಂಬ ನಮ್ಮ ಒಲವು ತೇಲಿ

ನನ್ನ ಕಣ್ಣ ಅಂಚಿನಲ್ಲಿ ಸಣ್ಣ ನೀರ ಹನಿಯು
ಹನಿಯ ಒಳಗೆ ಕುಳಿತು ನಗುತಲಿಹುದು ನಿನ್ನ ಹೆಸರು